## ಪುರಾತನ ಪ್ರಿಯತೆ

ಇದನ್ನು ಆಧುನಿಕ ಯುಗ ಎನ್ನುತ್ತೇವೆ. ವಿಜ್ಞಾನ ತಾಂತ್ರಿಕತೆಗಳು ದಿನದಿನವೂ ಅಧಿಕಾಧಿಕ ವೇಗದಲ್ಲಿ ಮುನ್ನಡೆಯುತ್ತಿವೆ. ವೈಜ್ಞಾನಿಕ ಮನೋಭಾವ, ವೈಚಾರಿಕತೆ ಮುಂತಾದ ಸೊಲ್ಲು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಆದರೂ ಹಳೆಯದನ್ನು ಬಿಡುವುದಕ್ಕೆ ನಾವು ಸಿದ್ಧರಿಲ್ಲ. ಹೊಸ ಹೊಸತನ್ನು ಅರಸಿ ಅರಸಿ ಬೇಸತ್ತು ಈಗ ಮತ್ತೆ ಹಳೆಯದನ್ನು ಹೊಸತಾಗಿ ಸ್ವೀಕರಿಸುವ ಪ್ರವೃತ್ತಿ ನಮ್ಮಲ್ಲಿ ಕಂಡುಬರುತ್ತಿದೆ. ಹಳೆಯ ಧಾರ್ಮಿಕ ಶ್ರದ್ಧೆ ಈಗ ಮರುಕಳಿಸುತ್ತಿದೆ. ದೇವಸ್ಥಾನಗಳ ಮತ್ತು ದೇವಸ್ಥಾನಕ್ಕೆ ಹೋಗುವವರ ಸಂಖ್ಯೆ ಅಧಿಕವಾಗುತ್ತಿದೆ. ಹಳೆಯ ಸಾಂಪ್ರದಾಯಿಕವಾದ ಕ್ರಿಯಾವಿಶಿಷ್ಟವಾದ ಧರ್ಮಾಚರಣೆಯು ಈಗ ಹೆಚ್ಚು ಜನಪ್ರಿಯವಾಗುತ್ತಿದೆ. ಹಳೆಯ ಮೂಢನಂಬಿಕೆಗಳೆಲ್ಲ ಹೊಸತಾಗಿ ಹೊಸರೂಪದಲ್ಲಿ ತಲೆ ಎತ್ತುತ್ತಿವೆ. ಯಂತ್ರ ಮಂತ್ರ ವಿಭೂತಿಗಳು ಮತ್ತೆ ಮನುಷ್ಯನನ್ನು ಅಲಂಕರಿಸುತ್ತಿವೆ.

ಜರ್ಮನರು ರಹಸ್ಯಪಂಥಗಳನ್ನೂ ಅತಿಭೌತಿಕ ವಿಷಯಗಳನ್ನೂ ಹೆಚ್ಚು ನಂಬುತ್ತಿದ್ದಾರಂತೆ. ಫ್ರೆಂಚ್ ರೇಡಿಯೊ ಪ್ರತಿದಿನವೂ ಹವಾಮಾನ ವರದಿಯ ಜೊತೆಗೆ ಆಯಾಯ ದಿನದ ಭವಿಷ್ಯವನ್ನೂ ಬಿತ್ತರಿಸುವುದಂತೆ. ಆ ದೇಶದಲ್ಲಿ೧೦,೦೦೦ ತೆರಿಗೆ ನೀಡುವ ಅತೀಂದ್ರಿಯ ದ್ರಷ್ಟ್ರುಗಳಿದ್ದಾರಂತೆ (*clairvoyants*). ತತ್ತ್ವಜ್ಞಾನಿ ಡೆಕಾರ್ಟ್ಸ್‌ನ ಪ್ರಭಾವದಿಂದಾಗಿ ಕ್ರಿ.ಶ.೧೬೬೬ರಲ್ಲಿ ಬಹಿಷ್ಕಾರ ಹಾಕಲ್ಪಟ್ಟ ಜ್ಯೋತಿಶ್ಶಾಸ್ತ್ರವು ಈಗ ಪುನಃ ಅಲ್ಲಿ ತನ್ನ ಸಾಮ್ರಾಜ್ಯವನ್ನು ಪ್ರತಿಷ್ಠಾಪಿಸುತ್ತಿದೆ. ಈಗ ಯೂರೋಪಿನಲ್ಲಿ ವೈಚಾರಿಕತೆಗೆ ವಿರುದ್ಧವಾದ ಚಳುವಳಿಯೊಂದು ನಡೆಯುತ್ತಿದೆ. ವಿಜ್ಞಾನ ತಾಂತ್ರಿಕತೆಗಳ ಪ್ರಭಾವದಿಂದ ನಾವು ಪ್ರಕೃತಿಯಿಂದ ದೂರವಾಗುತ್ತಿರುವುದಾಗಿ ಅವರು ಭಾವಿಸುತ್ತಾರೆ. ಹಿಂದೆ ಕ್ರೈಸ್ತ ಧರ್ಮದ ಪ್ರಭಾವದಿಂದ ನಿರ್ನಾಮಗೊಂಡ ಪುರಾತನಕಾಲದ ಕ್ರೈಸ್ತೇತರ ಧರ್ಮಗಳ (*Paganism*) ಪುನರಾವಿಷ್ಕಾರ ಅಲ್ಲಿ ನಡೆಯುತ್ತಿದೆ. ಆ ಧರ್ಮಗಳು ಪ್ರಕೃತಿಗೆ ನಿಕಟವಾಗಿ ಬಾಳುವುದನ್ನು ಕಲಿಸಿಕೊಡುತ್ತವೆ.

ಮನುಷ್ಯನಲ್ಲಿ ಪುರಾತನಪ್ರಿಯತೆ ಸ್ವಾಭಾವಿಕವಾಗಿರುತ್ತದೆ. ಅದನ್ನು ಅವನು ಸಂಪೂರ್ಣ ಬಿಟ್ಟುಬಿಡಲಾರ. ಇದಕ್ಕೆ ಇಂಬು ನೀಡುವ ಹಳೆಯ ಜೀವನಪೋಷಕ ನಂಬಿಕೆ ಮತ್ತು ವಿಚಾರಗಳನ್ನು ಮಾತ್ರ ನಾವು ಉಳಿಸಿಕೊಳ್ಳಬೇಕು. ಆಧುನಿಕತೆಯ ಕಡೆಗೆ ಹುಚ್ಚು ಓಟದಲ್ಲಿ ಹಳೆಯದನ್ನೆಲ್ಲ ನುಚ್ಚುನೂರು ಮಾಡುವುದರಿಂದ ಜನರಲ್ಲಿ ಪ್ರತಿಕ್ರಿಯೆ ಉಂಟಾಗುತ್ತದೆ, ಹಳೆಯದೆಲ್ಲವನ್ನೂ ಅತ್ಯಾಶೆಯಿಂದ ಪುನಃ ಅಪ್ಪಿಕೊಳ್ಳುವ ಪ್ರವೃತ್ತಿಯುಂಟಾಗುತ್ತದೆ. ಮಕ್ಕಳ ಕೈಯಲ್ಲಿರುವ ವಸ್ತುವನ್ನು ಬಲವಂತವಾಗಿ ಕಸಿದುಕೊಳ್ಳಲು ಪ್ರಯತ್ನಿಸಿದರೆ ಅವು ಅಳುತ್ತ ಆ ವಸ್ತುವನ್ನು ಮತ್ತೂ ಬಿಗಿಯಾಗಿ ಅಪ್ಪಿಕೊಳ್ಳುತ್ತವೆ. ಹಾಗೆಯೇ ಜನರೂ ಕೂಡ ಹಳೆಯದನ್ನು ಇನ್ನೂ ಹೆಚ್ಚು ಬಿಗಿಯಾಗಿ ಕಪಿಮುಷ್ಟಿಯಿಂದ ಅಪ್ಪಿಕೊಳ್ಳುತ್ತಾರೆ.

## ಮಹಿಳೆಯರ ಮಹತ್ತ್ವ

'ಮಹಿಳೆಯರು ಮತ್ತು ತಾಯಂದಿರು ನಾಗರಿಕ ಸಮಾಜದ ಅಸ್ತಿಭಾರ. ಆದರೂ ಜಗತ್ತಿನಾದ್ಯಂತ "ಬಡತನ" ಮತ್ತು "ಮಹಿಳೆ" ಸಮಾನಾರ್ಥಕ ಪದಗಳಂತಾಗಿಬಿಟ್ಟಿವೆ,' ಎಂದು ಹೇಳುತ್ತಾರೆ ವರ್ಲ್ಡ್ ಫುಡ್ ಪ್ರೋಗ್ರಾಮ್‌ನ ದಕ್ಷಿಣ ಏಶಿಯಾ ವಿಭಾಗದ ಮ್ಯಾನೇಜರ್ ಪೆಡ್ರೊ ಮೆಡ್ರಾನೊ (*The Hindu, 5-3-2000*)

ಜಗತ್ತಿನ ಒಟ್ಟು ಬಡವರಲ್ಲಿ ೧೦ರಲ್ಲಿ ಏಳು ಜನ ಮಹಿಳೆಯರಂತೆ, ಮತ್ತು ೫೫೦ ಮಿಲಿಯನ್ ಮಹಿಳೆಯರು ಬಡತನ ರೇಖೆಯ ಕೆಳಗೆ ವಾಸಿಸುತ್ತಿದ್ದಾರಂತೆ. ಭಾರತವು ಈ ಸ್ಪರ್ಧೆಯಲ್ಲಿ ಹಿಂದೆ ಬಿದ್ದಿಲ್ಲ. ಇಲ್ಲಿ ಮಹಿಳೆಯರಿಗೆ ಸಾಕಷ್ಟು ಆಹಾರವೂ ಸಿಗುತ್ತಿಲ್ಲ, ಕಾರಣ ಅವರು ಕೊನೆಯಲ್ಲಿ ಉಣ್ಣುವ ಪದ್ಧತಿ .

ನಾವು ಸ್ತ್ರೀಯರು ಜಗನ್ಮಾತೆಯ ಸ್ವರೂಪ ಎಂದು ಹೇಳುತ್ತೇವೆ. 'ಮಾತೃದೇವೋ ಭವ' ಎಂದು ತಾಯಂದಿರನ್ನು ದೇವತೆಯ ಪಟ್ಟಕ್ಕೆ ಏರಿಸುತ್ತೇವೆ. ಅವರನ್ನು ಪ್ರಧಾನ ಮಂತ್ರಿಗಳನ್ನಾಗಿ ಕೂರಿಸುತ್ತೇವೆ. ಆದರೆ ನಿಜವಾಗಿಯೂ ಸ್ತ್ರೀಯರ ಬಗ್ಗೆ ನಮಗೆ ಸ್ವಲ್ಪವೂ ಕಳಕಳಿ ಇಲ್ಲ. ಅವರನ್ನು ದೇವತಾ ದೃಷ್ಟಿಯಿಂದ ನೋಡುವುದಕ್ಕಿಂತ ಮಾನವೀಯ ದೃಷ್ಟಿಯಿಂದ ನೋಡುವುದು ಅತ್ಯಂತ ಮುಖ್ಯ. ಒಮ್ಮೆ ಶ್ರೀರಾಮಕೃಷ್ಣರನ್ನು ನೋಡಲು ಕೆಲವು ಮಹಿಳಾಭಕ್ತರು ಉಪವಾಸದಿಂದ ಬಂದರು. ಶ್ರೀರಾಮಕೃಷ್ಣರಿಗೆ ಇದನ್ನು ಕೇಳಿ ಸಹಿಸಲಾಗಲಿಲ್ಲ. 'ನೀವು ಖಂಡಿತ ಹೀಗೆ ಉಪವಾಸದಿಂದ ಬರಬೇಡಿ. ನೀವು ಉಪವಾಸವಿರುವುದನ್ನು ನಾನು ಸಹಿಸಲಾರೆ. ಇಲ್ಲಿಗೆ ಬರುವಾಗ ನೀವು ಯಾವಾಗಲೂ ಉಂಡು ಬರಬೇಕು' ಎಂದು ಅವರು ಅತ್ಯಂತ ನೊಂದು ನುಡಿದರು.

'ಯಾ ದೇವೀ ಸರ್ವ ಭೂತೇಷು ಕ್ಷುಧಾರೂಪೇಣ ಸಂಸ್ಥಿತಾ' ಎಂದು 'ದೇವೀಮಾಹಾತ್ಮ್ಯ'ಯಲ್ಲಿ ಹೇಳಿದೆ. ಹಸಿವೂ ದೇವೀಸ್ವರೂಪಿ ಮತ್ತು ಸ್ತ್ರೀಯೂ ದೇವೀಸ್ವರೂಪಿ. ಆದ್ದರಿಂದ ಹಸಿವು ಮತ್ತು ಸ್ತ್ರೀಯರಿಗೆ ಒಳ್ಳೆಯ ನಂಟಸ್ತನವನ್ನು ನಾವು ತಪ್ಪಾಗಿ ಕಲ್ಪಿಸಿದ್ದೇವೆ.

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಜೂನ್**

**10 ಶನಿವಾರ ಆಧ್ಯಾತ್ಮಿಕ ಶಿಬಿರ**

**ಸಮಯ ಸಂಜೆ ೩.೩೦ರಿಂದ ೭.೦೦ರವರೆಗೆ**

**ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ. ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ**